## ಡ್ರೈವಿಂಗ್‌ಗೆ ಪ್ರಶಂಸೆ

ಒಬ್ಬಳೇ ಕಾರು ಡ್ರೈವ್ ಮಾಡಿಕೊಂಡು ಹೋಗಬೇಡ ಎಂದು ಎಷ್ಟು ಹೇಳಿದರೂ ಕೇಳದೆ ಪರಮೇಶಿಯ ಹೆಂಡತಿ ಪ್ರಭಾ ಮನೆಯಿಂದ ದೂರದಲ್ಲಿರುವ ಶಾಪಿಂಗ್ ಕಾಂಪ್ಲೆಕ್ಸ್‌ಗೆ ಹೋಗಿದ್ದಳು. ವಾಪಸ್ಸು ಮನೆಗೆ ಬಂದಾಗ ಬಹಳ ಖುಷಿಯಲ್ಲಿದ್ದಳು. 'ಯಾಕೆ? ಬಹಳ ಖುಷಿಯಲ್ಲಿದ್ದೀಯ?' ಎಂದು ಕೇಳಿದ ಪರಮೇಶಿ. 'ರೀ, ನನಗೆ ಕಾರು ಓಡಿಸೋಕೆ ಬರಲ್ಲ ಎನ್ನುವಂತೆ ಮಾತಾಡ್ತೀರಿ, ಒಂದು ದಿನವೂ ನೀವು ನನ್ನ ಡ್ರೈವಿಂಗ್ ಬಗ್ಗೆ ಹೊಗಳಲಿಲ್ಲ. ಇಲ್ಲಿ ನೋಡಿ, ನನ್ನ ಡ್ರೈವಿಂಗ್ ಬಗ್ಗೆ ಟ್ರಾಫಿಕ್ ಪೊಲೀಸ್ ಪ್ರಶಂಸೆ ವ್ಯಕ್ತಪಡಿಸಿದ್ದಾರೆ... ಏನಂತ ಬರೆದಿದ್ದಾರೆ ನೀವೇ ನೋಡಿ ಸ್ವಲ್ಪ' ಎಂದು ವಿಂಡೋ ಗಾಜಿನ ಮೇಲೆ ಅಂಟಿಸಿದ್ದ ಚೀಟಿಯನ್ನು ತೆಗೆದು ಗಂಡನಿಗೆ ತೋರಿಸಿದಳು. ಅದರ ಮೇಲೆ 'ಪಾರ್ಕಿಂಗ್ ಫೈನ್' ಎಂದು ಬರೆದಿದ್ದನ್ನು ಕಂಡು ಪರಮೇಶಿ ನಕ್ಕು ಸುಮ್ಮನಾದ.

**ವಿ. ಹೇಮಂತಕುಮಾರ್**




ಕಲೆ: ಗಣೇಶ ಆಚಾರ್ಯ



## ಜಾದೂ ಕನ್ನಡಕ!

ಅನೇಕ ದಿನಗಳಿಂದ ಕಣ್ಣು ಸರಿಯಾಗಿ ಕಾಣುತ್ತಿಲ್ಲ ಎಂದು ಸತೀಶ ನೇರ ಕನ್ನಡಕದ ಅಂಗಡಿಗೆ ಹೋದ. ಪರಿಶೀಲಿಸಿದ ಅನಂತರ ಅಂಗಡಿಯವ, 'ನಂಬರ್ ಬದಲಾಗಿದೆ. ಈ ಕನ್ನಡಕ ಹಾಕಿಕೊಂಡು ನೋಡಿ, ಬೇಕಾದ್ದನ್ನು ಸಲೀಸಾಗಿ ಓದಬಹುದು' ಎಂದ. ಬೆರಗಾದ ಸತೀಶ, 'ಅರೇ! ಹೌದಾ? ನಿಜವಾ?' ಎಂದು ಕೇಳಿದ. 'ಹೌದು, ಓದಿ ನೋಡಿ ಬೇಕಾದ್ರೆ' ಎಂದ ಅಂಗಡಿಯವ. 'ಈ ಕನ್ನಡಕ ಹಾಕ್ಕೊಂಡ್ರೆ ಇಂಗ್ಲಿಷೂ ಓದಲು ಆಗ್ತದಾ? ಅಂತ ಕೇಳಿದ ಸತೀಶ. 'ಏನ್ ಬೇಕಾದ್ರೂ ಓದ್ಬಹುದು ಸ್ವಾಮಿ' ಎಂದ ಅಂಗಡಿಯವ. 'ಹಾಗಾದ್ರೆ, ಆರು ಕನ್ನಡಕ ಪ್ಯಾಕ್ ಮಾಡಿ ಕೊಟ್ಟು ಬಿಡಿ... ನಮ್ಮನೇಲಿ ಯಾರಿಗೂ ಕನ್ನಡಾನೇ ನೆಟ್ಟಗೆ ಓದೋಕೆ ಬರಲ್ಲ, ಎಲ್ಲರಿಗೂ ಒಂದೊಂದು ಕನ್ನಡಕ ಕೊಟ್ಟರೆ ಕನ್ನಡ–ಇಂಗ್ಲಿಷು ಎರಡೂ ಓದಬಹುದು...' ಎಂದ.

**ಲತಾ ಹೆಗಡೆ**